**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೆಷನ್ಸ್ ಕೇಸ ನಂಃ 398/2019

ಪಿಡಬ್ಲು :3 ಸಿಡಬ್ಲು :4

ಸಾಕ್ಷಿಯ ಹೆಸರು : ಶ್ರೀಮತಿ.ಶೋಭಾ ಜಮಾದಾರ

ಗಂಡನ ಹೆಸರು : ಶ್ರೀ.ಶ್ರಾವಣ ಜಮಾದಾರ

ವಯಸ್ಸು : 38 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ್ತವ್ಯ : ಮಾವಿನಕೆರೆ

ದಿನಾಂಕ : 05-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಮಹಾದೇವಿ ನಾಯಿಕ ನನಗೆ ಗೊತ್ತಿರುತ್ತಾರೆ. ನಾನು ಮತ್ತು ಅವರು ಒಟ್ಟಿಗೆ ಕೆಲಸಕ್ಕೆ ಹೋಗುತ್ತಿದ್ದೇವು. ಚಾಸಾಃ 5 ಶ್ರೀದೇವಿ, ಚಾಸಾಃ 6 ಸುಜಾತಾ, ಚಾಸಾಃ7 ಚಿದಾನಂದ, ಚಾಸಾಃ 8 ಯಲ್ಲವ್ವ , ಚಾಸಾಃ 9 ಶಾರಕ್ಕ , ಚಾಸಾಃ 10 ಪಾರ್ವತಿ, ಚಾಸಾಃ 11 ರಾಯಪ್ಪ ಇವರು ನನಗೆ ಗೊತ್ತಿರುತ್ತಾರೆ.

2. ಆರೋಪಿತರ ಪೈಕಿ 1 ನೇ ಆರೋಪಿ ಮಹೇಶ, 2 ನೇ ಆರೋಪಿ ರೂಪೇಶ, 3 ನೇ ಆರೋಪಿ ಸದಾಶಿವ ಇವರು ನನಗೆ ಗೊತ್ತಿರುತ್ತಾರೆ ಎಂದು ಮೂರು ಜನ ಆರೋಪಿತರನ್ನು ಸಾಕ್ಷಿ ನಿಖರವಾಗಿ ಗುರುತಿಸಿರುತ್ತಾರೆ. ಅವರು ನಮ್ಮ ಊರಿನವರು ಎಂದು ಹೇಳುತ್ತಾರೆ. ಉಳಿದ ಆರೋಪಿತರನ್ನು ನಾನು ನೋಡಿರುವುದಿಲ್ಲ.

3. ನಮ್ಮ ಮನೆಯಿಂದ ಚಾಸಾಃ1 ಮಹಾದೇವಿ ರವರ ಮನೆ 100 ಅಡಿ ದೂರದಲ್ಲಿ ಇದೆ. ಮಹಾದೇವಿ ಅವರ ಮನೆಯಲ್ಲಿ ಆಕೆ, ಆಕೆಯ ಮಕ್ಕಳು ವಾಸಮಾಡುತ್ತಾರೆ. ಚಾಸಾಃ1 ರವರಿಗೂ ಆರೋಪಿತರಿಗೂ ಈಗ 7 ವರ್ಷಗಳ ಹಿಂದೆ ಏನು ಜಗಳ ಆಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಪೋಲೀಸರು ನನ್ನನ್ನು ವಿಚಾರಿಸಿ , ನನ್ನ ಹೇಳಿಕೆಯನ್ನು ತೆಗೆದುಕೊಂಡಿಲ್ಲ.

(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಮ್ಮ ಮನೆ ಮಹಾದೇವಿಯವರ ಮನೆಯ ಅಕ್ಕ ಪಕ್ಕದಲ್ಲಿ ಇದೆ ಎನ್ನುವುದು ಸರಿಯಲ್ಲ. ಚಾಸಾಃ 1 ಮಹಾದೇವಿಯ ಮನೆ ಬಳಿ ಮಾತನಾಡಿದರೇ ಜೋರಾಗಿ ಕೂಗಾಡಿದರೆ ನಮ್ಮ ಮನೆಯವರೆಗೆ ಕೇಳಿಸುತ್ತದೆ ಎನ್ನುವುದು ಸರಿಯಲ್ಲ. " ದಿನಾಂಕಃ 16-07-2019 ರಂದು ನಾನು ಮನೆಯಲ್ಲಿರುವಾಗ ರಾತ್ರಿ 09.30 ಗಂಟೆ ಸುಮಾರಿಗೆ ಮಹಾದೇವಿಯವರ ಮನೆಯ ಮುಂದೆ ಚಿರಾಡುವ ಸಪ್ಪಳ ಕೇಳಿಸುತ್ತಿತ್ತು, ನಾನು ಅಲ್ಲಿಗೆ ಹೋಗಿ ನೋಡಲಾಗಿ , ಮಹಾದೇವಿ ನಾಯಕ ಅವರ ಮನೆಯ ಮುಂದೆ ಈಗ ನಾನು ಗುರುತಿಸಿದ್ದ ಮೂರು ಜನ ಆರೋಪಿತರನ್ನು ಬಿಟ್ಟು ಉಳಿದ ಆರೋಪಿತರು ಸ್ಥಳದಲ್ಲಿ ಇದ್ದರು ಎನ್ನುವುದು ಸರಿಯಲ್ಲ, ಆ ಆರೋಪಿತರು ಮಹಾದೇವಿ ಇವರಿಗೆ ಹಿಡಿದು ಎಳದಾಡಿ , ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎನ್ನುವುದು ಸರಿಯಲ್ಲ. ನಾನು ಆ

ಜಗಳವನ್ನು ನೋಡಿ, ಬಿಡಿಸಿರುತ್ತೇನೆ ಎನ್ನುವುದು ಸರಿಯಲ್ಲ. ಅಷ್ಟರಲ್ಲಿ ಚಿದಾನಂದ ರವರು ಬಿಡಿಸಲು ಸ್ಥಳಕ್ಕೆ ಬಂದಾಗ ಆ ಆರೋಪಿತರು ಅವರಿಗೂ ಸಹ ಹೊಡಿಬಡಿ ಮಾಡಿರುತ್ತಾರೆ ಎನ್ನುವುದು ಸರಿಯಲ್ಲ. ಆರೋಪಿತರ ಪೈಕಿ ಶಿವಾನಂದ ಮಾಕನ್ನವರ ಎನ್ನುವವರು ಚಾಸಾಃ1 ಮಹಾದೇವಿ ಇವರ ಕೊರಳಿನಲ್ಲಿ ಇದ್ದ ಬಂಗಾರದ ಬೋರಮಾಳ ಕಿತ್ತುಕೊಂಡನು, ಅಷ್ಟರಲ್ಲಿ ಪೋಲಿಸರು ಬಂದರು, ಆರೋಪಿತರು ಎಲ್ಲರೂ ಓಡಿ ಹೋದರು, ನಾನು ಜಗಳದ ಬಗ್ಗೆ ಮಹಾದೇವಿಯವರನ್ನು ಕೇಳಲಾಗಿ ಹಿಂದಿನ ದಿನ ರಾತ್ರಿ ನನ್ನ ತಂಗಿ ಪಾರ್ವತಿ, ಅವರ ತಾಯಿಗೆ ಬೆಳಗಾವಿ ಕೆ.ಎಲ್.ಇ ಆಸ್ಪತ್ರೆಗೆ ಉಪಚಾರಕ್ಕೆ ಕರೆದುಕೊಂಡು ಹೋಗಿದ್ದರಿಂದ, ಮನೆಯಲ್ಲಿ ಅವಳ ಗಂಡ ಚಿದಾನಂದ ಮತ್ತು ಮಕ್ಕಳು ಇದ್ದರು, ನಾನು ಅವರನ್ನು ಊಟಕ್ಕೆ ಕರೆಯಲಿಕ್ಕೆ ಹೋದಾಗ, ಮಹೇಶ ನಾಯಿಕ , ರೂಪೇಶ ನಾಯಿಕ , ಸದಾಶಿವ ಬಡಿಗೇರ ಇವರು ತನ್ನ ಗಂಡ ಚಿದಾನಂದ ಇವರ ಹತ್ತಿರ ಬಂದು, ನಮ್ಮನ್ನು ಕೆಲಸಕ್ಕೆ ಕರೆದುಕೊಂಡು ಹೋಗಿಲ್ಲ , ನೀನು ಒಬ್ಬನೇ ದುಡ್ಡು ಗಳಿಸುತ್ತಿಯಾ ಎಂದು ಅವಾಚ್ಯವಾಗಿ ಬೈದು, ಅವನಿಗೆ ಹೊಡಿಬಡಿ ಮಾಡುತ್ತಿರುವಾಗ ಚಿದಾನಂದನಿಗೆ ಹೊಡೆಯಬೇಡಿ ಎಂದು ಬಿಡಿಸಲು ಹೋದಾಗ ಆರೋಪಿತರು ಎಲ್ಲರೂ ಸೇರಿ ನನಗೆ ಸೀರೆ ಎಳೆದು ಜಗ್ಗಾಡಿ , ಕೈಯಿಂದ ಹೊಡೆಬಡೆ ಮಾಡಿದ್ದರು ಎಂದು ನನಗೆ ಹೇಳಿದಳು. " ಎಂದು ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ–9 ಎಂದು ಗುರುತಿಸಲಾಯಿತು.

2. ನಾನು ನಿಪಿ–9 ರಂತೆ ಹೇಳಿಕೆಯನ್ನು ನಿಡಿದ್ದು ಸತ್ಯ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 1 ರಿಂದ 3, ನೇ ಆರೋಪಿತರ ಪರ ಶ್ರಿ.ಆರ್.ಸಿ.ಪಿ ವಕೀಲರಿಂದ, 4, 7, 9 ರಿಂದ 13 ನೇ ಆರೋಪಿತರ ಪರ ಶ್ರಿ.ಎಸ್.ಬಿ.ಆರ್ ವಕೀಲರಿಂದ ಹಾಗೂ 5, 6,8 ನೇ ಆರೋಪಿತರ ಪರ ಶ್ರೀ. ಎ.ಸಿ.ಪಿ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.